# ಬೆರೆಸಿದ ರಾಗಾಲಾಪ

ಸಂಗೀತ ತನಗೆ ಗಿಫ್ಟ್ ಆಗಿ ಸಂದದ್ದು ಎಂದು ಆಗಾಗ ಅವರೇ ಹೇಳಿಕೊಳ್ಳುತ್ತಿದ್ದರು. ಅವರ ಹೆಸರಲ್ಲೂ 'ಗಿಫ್ಟ್' ಎಂಬ ಪದವಿದೆ. ಮಲಯಾಳಂನಲ್ಲಿ ಅವರು ಸ್ವರ ಸಂಯೋಜನೆ ಮಾಡಿದ ಕೆಲವು ಗೀತೆಗಳ ಗುಂಗು ಪಡ್ಡೆಗಳ ಬಾಯಲ್ಲಿ ಪದೇ ಪದೇ ಕೇಳಿಬರುತ್ತಿದ್ದ ಕಾಲವೊಂದಿತ್ತು. 'ಲಜ್ಜಾವತಿಯೆ' ಎಂಬ ಹಾಡಂತೂ ಅವರಿಗೆ ಜನಪ್ರಿಯತೆ ತಂದುಕೊಟ್ಟಿತು.

ಪಾಶ್ಚಾತ್ಯ ಸಂಗೀತ ಬಾಲ್ಯದಿಂದಲೂ ಅವರನ್ನು ಸೆಳೆಯಿತು. ಪಿಯಾನೊ ಕಲಿಯತೊಡಗಿದ ತಿರುವನಂತಪುರದ ಅವರಿಗೆ ಸಿನಿಮಾ ಗೀತೆಗಳ ಸಂಯೋಜಕ ಆಗುವ ಯೋಚನೆಯೇನೂ ಆಗ ಇರಲಿಲ್ಲ. ಪಿಯಾನೊ ಕಲಿಯುತ್ತಲೇ ಭಾರತೀಯ ಸಂಗೀತದ ಜಾಯಮಾನಕ್ಕೆ ಪಾಶ್ಚಾತ್ಯ ರಾಗಗಳನ್ನು ಒಗ್ಗಿಸುವುದು ಹೇಗೆ ಎಂದು ತಲೆಕೆಡಿಸಿಕೊಂಡರು. ಸ್ಥಳೀಯ ಬ್ಯಾಂಡ್‌ಗಳೇ ಅದಕ್ಕೆ ಪ್ರಯೋಗಶಾಲೆ.

ಕನ್ನಡ ಸಿನಿಮಾ ಲೋಕಕ್ಕೆ ಆಗಿನ್ನೂ ಅವರು ಹೊಸಬರು. 'ಲಜ್ಜಾವತಿಯೆ' ಟ್ಯೂನನ್ನೇ ಇಲ್ಲಿಯೂ ಬಳಸಿ ಗಣೇಶ್ ಅಭಿನಯದ ಚಿತ್ರದಲ್ಲಿ ಕೇಳಿಸಿದ್ದರು. ಆ ಹಾಡು ಅವರದ್ದೇ ಕಂಠದಲ್ಲಿತ್ತು. ಅವರದು ಭಿನ್ನ ಶಾರೀರ. ಅತ್ತ ಜಾನಪದವೆನಿಸುವ, ಕಂಪ್ಯೂಟರ್ ತಂತ್ರಾಂಶದಲ್ಲಿ ತುಸು ಉಜ್ಜಿದ, ಪಾಶ್ಚಾತ್ಯ ಬೀಟ್‌ಗಳ ಲಯಕ್ಕೂ ಒಡ್ಡಿಕೊಂಡ ಕಚ್ಚಾ ಕಂಠ ಅದು. ಅಂಥ ಶಾಸ್ತ್ರೀಯವೇನೂ ಅಲ್ಲ.

ಕನ್ನಡ ಸಿನಿಮಾ ಸಂಗೀತದಲ್ಲೂ ಜನಪ್ರಿಯತೆಯ ರುಚಿ ಕಂಡ ಅವರು ಸ್ಟುಡಿಯೊವೊಂದರಲ್ಲಿ ತಮ್ಮದೇ ಟ್ಯೂನ್‌ಗಳನ್ನು ಫೈನ್ ಟ್ಯೂನ್ ಮಾಡುತ್ತಿದ್ದರು. ಅವನ್ನು ಕೇಳಿ, ಸಾಹಿತ್ಯ ಬರೆವವರಿಗೆ ಕೆಲಸ ಹಂಚುವ ಪ್ರಕ್ರಿಯೆ ನಡೆದಿತ್ತು. 'ಮಾಧುರ್ಯದಲ್ಲೂ ಒಂದಿನಿತು ವೇಗ ತುಂಬಿಬಿಟ್ಟರೆ ಹಾಡುಗಳಿಗೆ ಕೇಳಿಸಿಕೊಳ್ಳುವ ಗುಣ ದಕ್ಕುತ್ತದೆ. ಕೇಳುಗರು ಒಂದೋ ಅದನ್ನು ತಾವೂ ಹಾಡಿಕೊಳ್ಳಬೇಕು ಇಲ್ಲವೇ ಕುಣಿಯಬೇಕು. ಆದರೆ ಎಷ್ಟೋ ಸಲ ನಮ್ಮ ಲೆಕ್ಕಾಚಾರ ಬುಡಮೇಲಾಗುವುದೂ ಉಂಟು. ಗೆದ್ದರೆ ಸಂತೋಷ. ಸೋತರೆ ಕಲಿಕೆ' ಹೀಗೆ ಸ್ವವಿಮರ್ಶೆ ಮಾಡಿಕೊಂಡಿದ್ದರು. 'ಗಗನವೇ ಬಾಗಿ ಬುವಿಯನು ಸೇರುವಾ ಹಾಗೆ...' ಟ್ಯೂನ್‌ಗೆ ಸಾಹಿತ್ಯವನ್ನೂ ಬರೆದಿರಲಿಲ್ಲ. ಹಾಗೆ ನೋಡಿದರೆ ಆ ಟ್ಯೂನ್ ಸಂಯೋಜನೆ ಮಾಡಿಕೊಟ್ಟಿದ್ದು ಬೇರೆ ಚಿತ್ರಕ್ಕೆ. ಅನಂತರ ಅವರು ತಿರುವನಂತಪುರಕ್ಕೆ ಮರಳಿದರು. ಕಾರಣಾಂತರಗಳಿಂದ ಆ ಸಿನಿಮಾ ಸೆಟ್ಟೇರಲಿಲ್ಲ. ಮುಂದೆ ನಾಗಶೇಖರ್ 'ಸಂಜು ವೆಡ್ಸ್ ಗೀತಾ' ಸಿನಿಮಾ ನಿರ್ದೇಶನಕ್ಕೆ ಕೈಹಾಕಿದರು. ಆಗ ಅವರಿಗೆ ದಕ್ಕಿದ ಟ್ಯೂನ್‌ಗಳು ಅವೇ.

ಟೀಕೆಗಳನ್ನು ಎದುರಿಸುತ್ತಲೇ ಫ್ಯೂಷನ್ ಸಂಗೀತದ ಮಾದರಿಗಳನ್ನು ದಕ್ಷಿಣ ಭಾರತದಲ್ಲಿ ಹಂಚಿದ ಅವರು ಈಗ ಮೊದಲಿನಷ್ಟು ಜನಪ್ರಿಯರೇನೂ ಅಲ್ಲ. ಆದರೂ ಸುಮ್ಮನೆ ಕೂರುತ್ತಿಲ್ಲ.

**● ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68